ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
ಆರ್.ಪಿ.ಸಂಖ್ಯೆ.57
ನಮೂನೆ ಸಂಖ್ಯೆ 4
(ಸಿವಿಲ್ )

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಿಕ್ಕಬಳ್ಳಾಪುರ.

ಎಸ್.ಸಿ. ಸಂಖ್ಯೆ: **77/2020**

| | |
|---|---|
| PW | 15 |
| CW | 19 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **04.08.2022**

| | | |
|---|---|---|
| ಸಾಕ್ಷಿಯ ಹೆಸರು | : | ವಿಜಯ್ ಕುಮಾರ್ |
| ತಂದೆಯ/ಗಂಡನ ಹೆಸರು | : | ಗಂಗಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಆಸ್ಪತ್ರೆಯ ನೌಕರ |
| ವಾಸಸ್ಥಳ | : | ಚಿಕ್ಕಬಳ್ಳಾಪುರ |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

**1.** ಮೃತ ನವೀನ ಗೊತ್ತಿಲ್ಲ. ಚಾಸಾ -1 ರಿಂದ 3 , 6 , 20 ಗೊತ್ತಿಲ್ಲ. ಆರೋಪಿಗಳು ಗೊತ್ತಿಲ್ಲ.

2. ಈಗ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ನ್ನು ನಿಪಿ -27 ಎಂದು , ಸಾಕ್ಷಿಯ ಸಹಿಯನ್ನು ನಿಪಿ -27(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಅಸ್ಪತ್ರೆಯಲ್ಲಿದ್ದಾಗ ಪೊಲೀಸರು ಸಹಿ ಮಾಡಿಸಿಕೊಂಡರು, ಅದು ಯಾವಾಗ ಮಾಡಿದ್ದೇನೆ ನೆನಪಿಲ್ಲ. ಪೊಲೀಸರು ಪರಿಚಯ ಇದ್ದ ಕಾರಣ ನನ್ನ ಸಹಿ ಪಡೆದುಕೊಂಡರು, ಅದು ಯಾವ ದಾಖಲೆ ,ಅದರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರು ಮಾಡಿ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಳ್ಳಲಿಲ್ಲ. ಅದಕ್ಕೆ ನನ್ನ ಜೊತೆ ಬೇರೆ ಯಾರು ಸಹಿ ಮಾಡಲಿಲ್ಲ.

*PW:15CW:19*

*3. ಈಗ ತೋರಿಸಿದ ನಿಪಿ - 23 ರ ಮಹಜರ್ ನಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ -23 (ಡಿ ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಆಸ್ಪತ್ರೆಯ ಹತ್ತಿರ ಎರಡು ವರ್ಷಗಳ ಹಿಂದೆ ಮಾಡಿರುತ್ತೇನೆ. ಅದು ಯಾವ ದಾಖಲೆ , ಅದರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲಿಲ್ಲ. ಅದಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.*

*4.ಈಗ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ - 28 ಎಂದು , ಸಾಕ್ಷಿಯ ಸಹಿಯನ್ನು ನಿಪಿ -28 (ಎ ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಆಸ್ಪತ್ರೆಯ ಹತ್ತಿರ ಎರಡು ವರ್ಷಗಳ ಹಿಂದೆ ಮಾಡಿರುತ್ತೇನೆ. ಅದು ಯಾವ ದಾಖಲೆ , ಅದರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲಿಲ್ಲ. ಅದಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.*

***(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)***

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ*

***5)** ದಿಃ 14.09.2020 ರಂದು ಸಂಜೆ 6.10 ರಿಂದ 7.00 ಗಂಟೆ ಸಮಯದಲ್ಲಿ ಚಿಕ್ಕಬಳ್ಳಾಪುರ ನಗರ ಪೊಲೀಸ್ ಠಾಣೆಯಲ್ಲಿ ಪೊಲಿಸರು ನನ್ನ ಸಮಕ್ಷಮ ಮಹಜರು ಮಾಡಿ ಮೊಬೈಲ್ ಗಳು ಮತ್ತು ದ್ವಿಚಕ್ರ ವಾಹನ ಕೆಎ - 3 - ಜೆ ವಿ -8813 ವಾಹನವನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಅದಕ್ಕೆ ನನ್ನ ಜೊತೆ ಆರೋಪಿಗಳು ಮತ್ತು ಚಾಸಾ -20 ರವರು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.*

*PW:15CW:19*

*6. ದಿಃ 14.09.2020 ರಂದು ರಾತ್ರಿ 7.15 ರಿಂದ 8.00 ಗಂಟೆಯವರೆಗೆ ಪೊಲೀಸರು ನನ್ನ ಸಮಕ್ಷಮ ಮೃತ ನವೀನ್ ವಾಸವಾಗಿದ್ದ ಮನೆಯಲ್ಲಿ ನಿಪಿ -28 ರಂತೆ ಮಹಜರು ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಸ್ಥಳವನ್ನು 2 ಮತ್ತು 3 ನೇ ಆರೋಪಿಗಳು ಪೊಲೀಸರಿಗೆ ತೋರಿಸಿದರು ಎಂದರೆ ಸರಿಯಲ್ಲ.*

*7. ದಿಃ 14.09.2020 ರಂದು ರಾತ್ರಿ 8.15 ರಿಂದ 9.00 ಗಂಟೆಯವರೆಗೆ ಚಿಕ್ಕಬಳ್ಳಾಪುರ ನಗರದ ಎಂ. ಜಿ ರಸ್ತೆಯ ಎಪಿ ಎಂ ಸಿ ಮಾರ್ಕೆಟ್ ಸಮೀಪ ಪ್ರಸನ್ನ ಮೊಬೈಲ್ ಸೇಲ್ಸ್ ಅಂಡ್ ಸರ್ವೀಸ್ ಅಂಗಡಿಯಲ್ಲಿ ಪೊಲೀಸರು ನನ್ನ ಸಮಕ್ಷಮ ನಿಪಿ - 23 ರಂತೆ ಮಹಜರು ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಒಂದು ಮೊಬೈಲ್ ರಶೀದಿಯ ಕಾರ್ಬನ್ ಪಟ್ಟಿಯನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸ್ಥಳವನ್ನು 1 ನೇ ಆರೋಪಿ ಪೊಲೀಸರಿಗೆ ತೋರಿಸಿದರು ಎಂದರೆ ಸರಿಯಲ್ಲ.*

***8.** ನಾನು ಈಗ ಓದಿ ಹೇಳಿದಂತೆ '' ದಿಃ 14.09.2020 ರಂದು ಚಿಕ್ಕಬಳ್ಳಾಪುರ ವೃತ್ತದ ಆರಕ್ಷಕ ನಿರೀಕ್ಷಕರವರು ತಮ್ಮ ಸಿಬ್ಬಂದಿಯಾದ ಜಯಣ್ಣ ರವರ ಮೂಲಕ ..................................................................................... .....................................................................................,........ .............................................................. ಆರೋಪಿಗಳನ್ನು ಮತ್ತು ಆರೋಾಪಿಗಳು ಕೃತ್ಯಕ್ಕೆ ಬಳಕೆ ಮಾಡಿರುವ ದ್ವಿಚಕ್ರ ವಾಹನಗಳನ್ನು ಮತ್ತು ಮೊಬೈಲ್ ನ್ನು ನೋಡಿದ್ದು ಪುನಃ ನೋಡಿದರೆ ಗುರುತಿಸುತ್ತೇನೆ. " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ **- 29** ಎಂದು ಗುರುತಿಸಲಾಯಿತು.*

*PW:15CW:19*

*9**)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ - 29 ರಂತೆ ಪೊಲೀಸರಿಗೆ ಹೇಳಿಕೆ ನೀಡಿ ,ಮಹಜರುಗಳಿಗೆ ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

*ಪಾಟೀ ಸವಾಲುಃ ಶ್ರೀ . ಹೆಚ್ . ಆರ್ . ವಿ ವಕೀಲರು ಆರೋಪಿತರ ಪರವಾಗಿ ಏನೂ ಇಲ್ಲವೆಂದು ನುಡಿದಿರುತ್ತಾರೆ.*

*ಮರುವಿಚಾರಣೆಃ ಇಲ್ಲ.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 04.08.2022 ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು.)*

*ಓದಿ ಹೇಳಿ ಕೇಳಿ ಸರಿ ಇದೆ*

*ಸಹಿ/-*
*ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*

*PW:15CW:19*